3) ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ 2014

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು:– ಹೇಳಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ICAR guidelines ಪ್ರಕಾರ ನಾವು other members ಎಂದು ಹೇಳಿ ಅಂದರೆ ex-officio members ಬಿಟ್ಟು ಬೇರೆ members nominate ಮಾಡುವಂಥ ಸಂದರ್ಭದಲ್ಲಿ ಸರ್ಕಾರಕ್ಕೆ, ಕೆಲವು ಕುಲಾಧಿಪತಿಗಳಿಗೆ ಅವಕಾಶ ಇರಬೇಕು. ಕುಲಪತಿಗಳಿಗೂ ಅವಕಾಶ ಇರಬೇಕು. ಸರ್ಕಾರಕ್ಕೂ ಕೂಡ ಅಧಿಕಾರ ಇರಬೇಕು ಎನ್ನತಕ್ಕಂಥ ಹಿನ್ನೆಲೆಯಲ್ಲಿ ಅದನ್ನು ಯಾವ ರೀತಿಯಾಗಿ ಮಾಡಿದರೆ ಸೂಕ್ತವಾಗುತ್ತದೆ, ಅವರಿಂದ ಹೆಚ್ಚು participation ಬರುವುದಕ್ಕೆ ಸಾಧ್ಯ ಎನ್ನತಕ್ಕಂಥ ಹಿನ್ನೆಲೆಯಲ್ಲಿ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಆ ತಿದ್ದುಪಡಿಯಲ್ಲಿ ನಾವು ಈಗಾಗಲೇ ಪಶು ವೈದ್ಯಕೀಯ ಮತ್ತು ಪಶು ಮೀನುಗಾರಿಕೆ ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ, ಬೋಧನೆ, ವಿಸ್ತರಣದಲ್ಲಿ ಶಿಕ್ಷಣದ ವಿಶೇಷ ಜ್ಞಾನ ಹೊಂದಿರತಕ್ಕಂಥವರನ್ನು ಅಥವಾ ಪ್ರಾಯೋಗಿಕವಾಗಿ ಅನುಭವ ಹೊಂದಿರತಕ್ಕಂಥವರನ್ನು ಸರ್ಕಾರದಿಂದ ನೇಮಕಾತಿಯನ್ನು ಮಾಡಬಹುದು ಎನ್ನತಕ್ಕಂಥದ್ದು ಒಂದು ಬದಲಾವಣೆ ಕೇಳಿದ್ದೇವೆ. ಸರ್ಕಾರದಿಂದ

ಪ್ರಗತಿಪರವಾದಂಥ ಜಾನುವಾರು ಸಾಕಾಣಿಕೆದಾರರು ಇರುತ್ತಾರೆ. ಅವರನ್ನು ಸರ್ಕಾರದಿಂದ ನೇಮಕಾತಿ ಮಾಡಬೇಕು ಮತ್ತು ಪ್ರಗತಿಪರ ಮೀನುಗಾರರು ಸರ್ಕಾರದಿಂದ ನೇಮಕಾತಿಯಾಗಬೇಕು. ಮೀನುಗಾರಿಕೆಗೆ ಸಂಬಂಧಪಟ್ಟಂಥ ಯಾವುದೇ ಕೈಗಾರಿಕೆಗಳಲ್ಲಿ ಬಂದಿರತಕ್ಕಂಥವರು ಸರ್ಕಾರದಿಂದ ನೇಮಕಾತಿಯಾಗಬೇಕು. ಈ ಕುಲಾಧಿಪತಿಗಳಿಗೆ ಗ್ರಾಮೀಣ ಮಟ್ಟದ ಕಾರ್ಯಕರ್ತೆಯರನ್ನು ನೇಮಕಾತಿ ಮಾಡತಕ್ಕಂಥದ್ದನ್ನು ಇವತ್ತು chancellor ಗೆ ಇದನ್ನು ಇಟ್ಟಿದೆ. ಅದೇರೀತಿಯಾಗಿ ಒಬ್ಬ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ತಜ್ಞರನ್ನು ಮಾಡುವುದಕ್ಕೆ ಕುಲಾಧಿಪತಿಗಳಿಗೆ ಅವಕಾಶ ಕೂಡ ಮಾಡಿದೆ. ICARನಿಂದ ಯಾರೂ ಕೂಡ representatives ಇರಲಿಲ್ಲ. ICAR ನಿಂದ representatives ಕೂಡ ಇರಬೇಕೆಂದು ಮತ್ತು ಪಶು ವೈದ್ಯಕೀಯ ಪರಿಷತ್ತಿನ ಅವರ ಒಬ್ಬ ಅಧ್ಯಕ್ಷರು ಇಲ್ಲಿರಬೇಕೆನ್ನುವ ದೃಷ್ಟಿಯಿಂದ ನಾವು ಕೆಲವು ಬದಲಾವಣೆಗಳನ್ನು ತಂದಿದ್ದೇವೆ. ಇದಕ್ಕೆ ಕಾರಣವೇನೆಂದರೆ, ಮಾನ್ಯ ಸಭಾಧ್ಯಕ್ಷರೆ, ತಮಗೂ ಕೂಡ ಗೊತ್ತಿರತಕ್ಕಂಥದ್ದು. ಇತ್ತೀಚೆಗೆ ನಮ್ಮ VCIನಲ್ಲಿ ನಮ್ಮ college ಗಳಿಗೆ ಮಾನ್ಯತೆಯನ್ನು ಪಡೆಯಬೇಕಾದಾಗ ಎಷ್ಟು ಕಷ್ಟವಾಯಿತು ಎನ್ನತಕ್ಕಂಥ ಹಿನ್ನೆಲೆಯಲ್ಲಿ ನಾವು ಅನೇಕ ಬಾರಿ ದೆಹಲಿಗೆ ಹೋಗಿ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ನಮ್ಮ ನಿಮ್ಮ guidelines ಪ್ರಕಾರ ನಿಮ್ಮ ಕಾನೂನನ್ನು ತಿದ್ದುಪಡಿ ಮಾಡಿ ಎನ್ನತಕ್ಕಂಥದ್ದು ಅವಶ್ಯಕತೆ ಇದೆ ಎನ್ನತಕ್ಕಂಥ ಅನುಭವಕ್ಕೆ ಬಂದ ಹಿನ್ನೆಲೆಯಲ್ಲಿ ಇವತ್ತು ಸರ್ಕಾರಕ್ಕೆ, ಕೆಲವು ಕುಲಾಧಿಪತಿಗಳಿಗೆ ಮತ್ತು ಉಪ ಕುಲಪತಿಗಳಿಗೆ ಮಾಡುವುದರ ಜೊತೆಗೆ ಮತ್ತು ಬೇರೆ university ಯಿಂದಲೂ ಕೂಡ ಒಬ್ಬ Dean ಅನ್ನು nominate ಮಾಡತಕ್ಕಂಥ Vice Chancellor ಗೆ ಕೂಡ ಅಧಿಕಾರವನ್ನು ಕೊಡತಕ್ಕಂಥ ತಿದ್ದುಪಡಿ ಅವಶ್ಯಕತೆ ಇದೆ ಎಂದು ನಮ್ಮ ಭಾವನೆಯ ಹಿನ್ನೆಲೆಯಲ್ಲಿ ಇವತ್ತು ಮಂಡಿಸಿದ್ದೇನೆ. ಅದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂಬ ವಿನಂತಿಯನ್ನು ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈಗ ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾನಿಲಯದ ಈ ತಿದ್ದುಪಡಿ

ಏನು ತಂದಿದ್ದಾರೆ, ಇದೆಲ್ಲವನ್ನೂ ನಾವು ಒಪ್ಪಿಕೊಳ್ಳುವುದಕ್ಕಿಂತ ಮೊದಲು ಒಂದು ಸ್ಪಷ್ಟೀಕರಣ ಕೇಳುವುದಕ್ಕೆ ಬಯಸುತ್ತೇನೆ. ನಾವು ಎಚ್ಚರಿಕೆಯನ್ನು ವಹಿಸಿಕೊಳ್ಳಬೇಕು. ಇವತ್ತಿನ ಈ ವಿಶ್ವವಿದ್ಯಾನಿಲಯ ಬಂದ ಮೇಲೆ ನಮಗೆ ಒಳ್ಳೆಯದಾಗಿದೆ. ವಿಶೇಷವಾಗಿ ಯುವಕರಿಗೆ ಈ ಹೈನುಗಾರಿಕಾ ಕ್ಷೇತ್ರದಲ್ಲಿ ಆಸಕ್ತಿ ಬರುವಂತೆ ಆಗಿದೆ. ಅವರು ಇದರೊಳಗೆ ತಮ್ಮ ಶಿಕ್ಷಣವನ್ನು ಪಡೆದು ನಮ್ಮ ಸರ್ಕಾರಕ್ಕೆ ಮತ್ತು ಸರ್ಕಾರೇತರವಾಗಿಯೂ ಹೈನುಗಾರಿಕಾ ಕ್ಷೇತ್ರದಲ್ಲಿ ಒಳ್ಳೆಯ ಕೊಡುಗೆಯನ್ನು ನಮ್ಮ ಯುವಕರು ಕೊಡುವಂತೆ ಆಗಿದೆ. ನಮ್ಮ ಸರ್ಕಾರದ ನಿರೀಕ್ಷೆಯಷ್ಟು ವಿದ್ಯಾರ್ಥಿಗಳು ಇನ್ನೂ ಅಲ್ಲಿ ದಾಖಲಾಗುತ್ತಿಲ್ಲ. ಇನ್ನೂ ಅನೇಕ ದಾಖಲಾತಿಗಳು ಬೇಕು. ಹೈನುಗಾರಿಕೆ ಬಿಟ್ಟು ನಾವು ನಮ್ಮ ಗ್ರಾಮೀಣ ಭಾಗದ ರೈತರು ಬದುಕುವುದಕ್ಕೆ ಆಗುವುದೇ ಇಲ್ಲ. ಹಾಗಾಗಿ, ಹೈನುಗಾರಿಕೆಯನ್ನು ಮಾಡುತ್ತಿರುವ ಸಂದರ್ಭದಲ್ಲಿ ರೋಗ ರುಜಿನಗಳು ಅಥವಾ ಬೇರೆ ಇನ್ಯಾವುದೇ ರೀತಿಯ ಸಹಾಯ, ಅನುಕೂಲಗಳು ಆಗಬೇಕು ಎಂದಾದರೆ, ಈ ರೀತಿ ಶಿಕ್ಷಣವನ್ನು ಪಡೆದಂಥ ಯುವಕರು ಬೇಕು. ಯುವಕರ ಸಂಖ್ಯೆ ಹೆಚ್ಚಬೇಕು. ಅದೆಲ್ಲವೂ ಸ್ವಾಗತಾರ್ಹವಾಗಿದೆ. ಇದಾಗಬೇಕು. ಇದು ನಡೆಯಬೇಕು. ಆದರೆ, ಇಲ್ಲಿ ಅಪಾಯ ಇರುವುದೇನೆಂದರೆ, ಈಗ ಸರ್ಕಾರದಿಂದ ನಾಮ ನಿರ್ದೇಶನ ಹೊಂದಿದ ಒಬ್ಬ ವಿಜ್ಞಾನಿ ಎಂದಿದೆ ಅಥವಾ ಸರ್ಕಾರದಿಂದ ನಾಮ ನಿರ್ದೇಶನ ಹೊಂದಿದ ಪ್ರಗತಿಪರ ಜಾನುವಾರು ಸಾಕಾಣಿಕೆದಾರ ಎಂದಿದೆ ಅಥವಾ ಮೀನುಗಾರ ಎಂದಿದೆ. ಸರ್ಕಾರದಿಂದ ನಾಮ ನಿರ್ದೇಶನ ಮಾಡುವವರು. ಇದನ್ನು ಮಾಡುವಂಥವರ ಅರ್ಹತೆಗಳೇನಾಗಬೇಕು ಎನ್ನುವುದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಅರ್ಹತೆಗಳ ಬಗ್ಗೆ ನಾವು ಸ್ಪಷ್ಟವಿಲ್ಲದೇ ಹೋದರೆ ನೇಮಕ ಮಾಡುವಾಗ ಏನಾಗುತ್ತದೆಂದರೆ, ಸರ್ಕಾರದ ಮೇಲೆ ಒತ್ತಡ ಬಂದು ಅದೊಂದು ರಾಜಕೀಯವಾಗಿ ಯಾರದೋ ಹೆಸರನ್ನು ತಾವು ಶಿಫಾರಸು ಮಾಡುವ ಅನಿವಾರ್ಯತೆ ನಿರ್ಮಾಣವಾಗುತ್ತದೆ. ರಾಜಕೀಯವಾಗಿ ಆಮೇಲೆ ತೀರ್ಮಾನ ತೆಗೆದುಕೊಳ್ಳಬೇಕಾದಂಥ ನಿರ್ಣಯ, ಸಂದರ್ಭಗಳು ಬರುತ್ತವೆ. ಹಾಗಾಗಿ, ತಾವು ಸರ್ಕಾರ ಅಥವಾ ಇಲ್ಲಿ ಕುಲಾಧಿಪತಿಗಳಿಂದ ನಾಮ

ನಿರ್ದೇಶಿತರಾಗಿರುವಂಥ ವ್ಯಕ್ತಿಗಳು ಯಾರ್ಯಾರಿದ್ದಾರೆ, ಇದೆಲ್ಲ post ಗಳನ್ನು ನಾನೇನು ಹೇಳಲಿಕ್ಕೆ ಹೋಗುವುದಿಲ್ಲ, ಎಲ್ಲಾ post ಗಳು ಒಂದು ಸರ್ಕಾರ ಅಥವಾ ಇನ್ನೊಂದು ಕುಲಾಧಿಪತಿಗಳಿಂದ ಎಂದು ಇದೆ. ಈ ಇಬ್ಬರೂ ನೇಮಕ ಮಾಡುವಂಥ ಹುದ್ದೆಗಳಿಗೆ ಅರ್ಹತೆ ಯಾವುದು? ಅವರನ್ನು ಆಯ್ಕೆ ಮಾಡುವಂಥ ವಿಧಿ ವಿಧಾನಗಳು ಯಾವುದು? ಇದು ಸ್ಪಷ್ಟವಾಗದೇ ಹೋದರೆ ಇಲ್ಲವೆಂದರೆ ಇದೊಂದು ಮತ್ತೊಂದು ರಾಜಕೀಯ rehabilitation centre ಆಗುತ್ತದೆ. ಇಲ್ಲಿ ನಿಮಗೆ ಒತ್ತಡಕ್ಕೆ ಯಾರ್ಯಾರು ಗೆದ್ದಿದ್ದಾರೆ, ಸೋತಿದ್ದಾರೆ . . . .

ಅಧ್ಯಕ್ಷರು:– ಗೊತ್ತಾಯಿತು. ಒಂದು ನಿರ್ದಿಷ್ಟವಾದ. . . .

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– Rehabilitation centre ಆಗುತ್ತದೆ. ಅದಾಗಬಾರದು ಎಂದರೆ, ನೀವು ಅದಕ್ಕೆ ಈಗಲೇ ಸದನದಲ್ಲಿ ಸರಿಯಾದಂಥ ಒಂದು ಮಾನದಂಡವನ್ನು ಪ್ರಕಟಿಸಬೇಕು. ಇಂಥವರು, ಈ ವಿಜ್ಞಾನಿಯಾಗುವುದಕ್ಕೆ ಇಂಥ ಅರ್ಹತೆಗಳು ಇರಬೇಕು ಅಥವಾ ಒಬ್ಬ ಪ್ರಗತಿಪರ ಮೀನುಗಾರ, ಪ್ರಗತಿಪರ ಜಾನುವಾರು ಸಾಕಾಣಿಕೆದಾರ ಎಂದರೆ ಯಾರಾಗಬೇಕು? ಅವನ ಅರ್ಹತೆ ಏನಿರಬೇಕು? ಇದೆಲ್ಲವೂ ಸ್ಪಷ್ಟವಾಗಬೇಕು.

ಅಧ್ಯಕ್ಷರು:– ಆಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸಾಕಾಣಿಕೆದಾರರು ಎನ್ನುವುದು ಅಂದರೆ ಬೇರೆ ಬೇರೆ ಅನೇಕ ರೀತಿಯಲ್ಲಿ. . . .

ಅಧ್ಯಕ್ಷರು:– ಗೊತ್ತಾಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾವು ಈ ವಿಷಯದ ಬಗ್ಗೆ ಸ್ಪಷ್ಟತೆ ಬರದೇ ಹೋದರೆ ಆಮೇಲೆ. . .

ಅಧ್ಯಕ್ಷರು:– ದುರುಪಯೋಗವಾಗಬಹುದು ಎಂದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸರ್ಕಾರ ರಾಜಕೀಯವಾಗಿ ನೇಮಕ ಮಾಡುತ್ತಾರೆ. ಆಮೇಲೆ ಅದನ್ನು ನಾವೆಲ್ಲಾ ಒಪ್ಪಿಕೊಳ್ಳಬೇಕಾದಂಥ ಸ್ಥಿತಿ ಬರುತ್ತದೆ. ಹಾಗಾಗಿ, ಈ ಅರ್ಹತೆಗಳು ಸ್ಪಷ್ಟಗೊಳ್ಳಬೇಕೆನ್ನುವುದನ್ನು

ಕೇಳಿಕೊಳ್ಳುತ್ತೇನೆ. ನಾವು ಪಶು ಸಂಗೋಪನೆ ವಿಷಯದಲ್ಲಿ ಎಷ್ಟೆಷ್ಟು ಪಾರದರ್ಶಕವಾದಂಥ ಜವಾಬ್ದಾರಿ ಸ್ವೀಕರಿಸುತ್ತೇವೆಯೋ ಅಷ್ಟಷ್ಟು ನಮ್ಮ ಗ್ರಾಮೀಣ ಭಾಗದ ಜನತೆಗೆ ಒಳ್ಳೆಯದಾಗುತ್ತದೆ. ನಿಶ್ಚಿತವಾಗಿ ಒಳ್ಳೆಯದಾಗುತ್ತದೆ. ನೀವು ಹೈನುಗಾರಿಕೆ ಬಗ್ಗೆ ಮೇಲ್ನೋಟದ ಈ ರೀತಿಯ ಕೆಲವು ಸುಧಾರಣೆ ಮಾಡುತ್ತಿದ್ದೀರಿ.

ಅಧ್ಯಕ್ಷರು:– ಆಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಆದರೆ, ಅಲ್ಲಿ ಗೋ ಹತ್ಯೆ ನಡೆದು ಹೈನುಗಾರಿಕೆ ಇವತ್ತು ಹೇಗೆ ನಾಶವಾಗುತ್ತಿದೆ. . . .

ಅಧ್ಯಕ್ಷರು:– ಅಲ್ಲಿ ಹೋಗಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಎನ್ನುವುದನ್ನೂ ನಾವು ನೋಡುತ್ತಿದ್ದೇವೆ. ಪ್ರಸ್ತುತ ಅಲ್ಲದೇ ಹೋದರೂ ಗೋ ಹತ್ಯೆಯನ್ನು . . . .

ಅಧ್ಯಕ್ಷರು:– ಆಯಿತು, ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಪಶು ಸಂಗೋಪನೆಯನ್ನು ನಾವು ಉಳಿಸಿಕೊಳ್ಳಬೇಕಾದಂಥ ಅಗತ್ಯತೆ ಇದೆ. ಬಹಳ ದೊಡ್ಡ ಆತಂಕಕ್ಕೆ ಒಳಗಾಗುವಂಥ ವಿಷಯ ಎನ್ನುವುದು ಗೊತ್ತಿದೆ. ಹಾಗಾಗಿ, ನಾನು ಈ ಸಂದರ್ಭದಲ್ಲಿ ಹೇಳುವುದು. . . .

ಅಧ್ಯಕ್ಷರು:– ಹೇಳಿದ್ದೀರಿ, ಸಾಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಗೋವುಗಳ ರಕ್ಷಣೆಯ ದೃಷ್ಟಿಯಿಂದ ನಾವು ಎಷ್ಟು ಜವಾಬ್ದಾರಿ ತೆಗೆದುಕೊಂಡರೂ ಕಡಿಮೆ.

ಅಧ್ಯಕ್ಷರು:– ಸಾಕು. ದತ್ತಾರವರೆ, ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇದಕ್ಕೆ ಹೆಚ್ಚಿನ ಶಕ್ತಿ ಬರುವಂತೆ ಪಾರದರ್ಶಕವಾಗಿ ನೇಮಕ ಆಗುವುದಕ್ಕೆ ಸರ್ಕಾರ ಯಾವ ರೀತಿ. ...

ಅಧ್ಯಕ್ಷರು:– ಆಯಿತು ಹೇಳಿದ್ದೀರಿ. ಮತ್ತೆ repeat ಮಾಡಬೇಡಿ.

ಅಧ್ಯಕ್ಷರು:– ಇದರಲ್ಲಿ ಚರ್ಚೆ ಮಾಡುವುದಕ್ಕೆ ಏನೂ ಇಲ್ಲಾರಿ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ನಾನು ಕೂಡ ಪಶುಸಂಗೋಪನಾ ಮತ್ತು ಹೈನುಗಾರಿಕೆ ಸಚಿವನಾಗಿದ್ದೆ. ಈ ವಿಧೇಯಕ ತಂದಿರುವುದು ಒಳ್ಳೆಯದು. ಆದರೆ, ನಮ್ಮ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಅದಕ್ಕೊಂದು ಮಾನದಂಡ ಬೇಕಾಗುತ್ತದೆ. ನಾನು ಸುಮಾರು ಮೂರುವರೆ ವರ್ಷಗಳ ಕಾಲ ಇಲಾಖೆಯಲ್ಲಿ ಕೆಲಸ ಮಾಡಿದ್ದೆ. ವಿಶೇಷವಾಗಿ ಮಲೆನಾಡಿನ ಭಾಗದಲ್ಲಾಗಲಿ ಅಥವಾ ಬಯಲು ಸೀಮೆ ಪ್ರದೇಶದಲ್ಲಾಗಲಿ, ಹೈನುಗಾರಿಕೆ ಸಣ್ಣ ಪುಟ್ಟ ರೈತರ ಬದುಕಿನ ಜೀವಾಳವಾಗಿದೆ. ಇಲ್ಲಿ ವಿಜ್ಞಾನಿ ಎಂದು ಹೇಳುವ ಸಂದರ್ಭದಲ್ಲಿ ಅವರು ಹೇಳಿದ ಹಾಗೆ ಇದಕ್ಕೊಂದು ಮಾನದಂಡ ಬೇಕು. ಅವರಿಗೇನು education ಇರಬೇಕು, ಇವೆಲ್ಲಾ ಹಾಕದೇ ಹೋದರೆ ಅವರು ಹೇಳುವ ಹಾಗೆ ಇದೊಂದು rehabilitation centre ಆಗತಕ್ಕಂಥ ಸಾಧ್ಯತೆಗಳು ಹೆಚ್ಚಿವೆ. ಅದ್ದರಿಂದ ಇದಕ್ಕೆ ತಾವು ಅವಕಾಶ ಕೊಡದೆ ಇದು ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡುವ ರೀತಿಯಲ್ಲಿ ಆಗಲಿ ಎನ್ನುವ ದೃಷ್ಟಿಯಿಂದ ಹೇಳುವುದಾದರೆ,

ಅಧ್ಯಕ್ಷರು:– ಅದರಲ್ಲಿ ಸ್ವಲ್ಪ ಅನುಭವವಿರುವವರನ್ನು, qualified ಇರುವಂಥವರನ್ನು ಹಾಕಬೇಕು. ನಿಯಮ ಮಾಡಿ.

ಶ್ರೀ ಬಿ.ಬಿ. ನಿಂಗಯ್ಯ:– ಈ ಬಗ್ಗೆ ಸಮಗ್ರವಾಗಿ ಆಲೋಚಿಸಿ ಈ ವಿಧೇಯಕ ತಿದ್ದುಪಡಿ ತರುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ಇಂದು ಭಾರತ ದೇಶದಲ್ಲಿ ಹೈನುಗಾರಿಕೆಗೆ ವಿಫುಲವಾದ ಅವಕಾಶಗಳಿವೆ. ಆದ್ದರಿಂದ, ಅವುಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:– ಅದು ಬೇಡ. ದತ್ತಾರವರೆ ತಾವು ಹೇಳಿ. ರೀ ಸಾಕು ಬಿಡಿ. ಪುಟ್ಟಣ್ಣಯ್ಯನವರೆ ನೀವು ಹೇಳಿ.

ಶ್ರೀ ಕೆ.ಎಸ್. ಪುಟ್ಟಣಯ್ಯ:– ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಒಳ್ಳೆಯ ಮಸೂದೆ ಇದೆ. ಅನುಭವ ಮತ್ತು ಶಿಕ್ಷಣ ಎರಡು ಸೇರಿಸಿ ತಂದಿರತಕ್ಕಂಥ ಮಸೂದೆಯಲ್ಲಿ ಬಹಳ ಮುಖ್ಯವಾಗಿರುವುದು ಏನೆಂದರೆ, ದೇಶಿಯ ತಳಿಗಳನ್ನು ರಕ್ಷಣೆ ಮಾಡತಕ್ಕಂಥ ಒಬ್ಬ ದೊಡ್ಡ ವಿಜ್ಞಾನಿ ಅಥವಾ ಅನುಭವವಿರುವ ರೈತನನ್ನು ಇದರಲ್ಲಿ ಸೇರಿಸಬೇಕು. ಅಧ್ಯಕ್ಷರೆ, ಇದರಲ್ಲಿ ಇದನ್ನು ಬರೆದಿಲ್ಲ ಸ್ವಾಮಿ. ಮುಖ್ಯವಾಗಿ ದೇಶೀಯ ತಳಿಯನ್ನು ರಕ್ಷಣೆ ಮಾಡತಕ್ಕಂಥ ಒಬ್ಬ ವಿಜ್ಞಾನಿಯಾಗಬಹುದು, ಒಬ್ಬ ಅನುಭವ ಇರುವ ರೈತರಾಗಬಹುದು ಇವರನ್ನು ಇದರಲ್ಲಿ ಸೇರಿಸಬೇಕು.

ಶ್ರೀ ಎಂ. ರಾಜಣ್ಣ:– ಮಾನ್ಯ ಅಧ್ಯಕ್ಷರೆ, 2004ರಲ್ಲಿ ನಾನು ಪಶು ವಿಶ್ವವಿದ್ಯಾಲಯದ senate member ಆಗಿದ್ದೆ. ಈಗ ಇವರೇನು ಒಬ್ಬ ವಿಜ್ಞಾನಿ ಇರಬೇಕು, ಡೀನ್ ಇರಬೇಕೆಂದೇನು ಸೂಚನೆ ಕೊಡುತ್ತಿದ್ದಾರೆ, ಅದರ ಬಗ್ಗೆ ಹೇಳುವುದಾದರೆ, ಹಿಂದೆ ಯಾವ ರೀತಿಯಾಗಿ ಪಶುವೈದ್ಯಾಧಿಕಾರಿಯನ್ನು ಅಥವಾ veterinary doctorಅನ್ನು nominate ಮಾಡುತ್ತಿದ್ದರು. ಒಬ್ಬ Fisheryಯಲ್ಲಿ ಅನುಭವ ಇರುವಂಥ industrialist or diary technology ಯವರನ್ನು ಮಾಡುತ್ತಿದ್ದರು. ಆ ರೀತಿ ಮಾಡಿದರೆ ಸೂಕ್ತ. ಕೇವಲ ಒಬ್ಬ ಪ್ರಗತಿಪರ ರೈತ, ಪ್ರಗತಿಪರ ಚಿಂತಕ, ಎಂದು ಮಾಡಿದರೆ ಅಲ್ಲಿ ವಿಶ್ವವಿದ್ಯಾಲಯದಲ್ಲಿ ICAR ನಿಂದ ಬರುವಂಥವರ ಬಗ್ಗೆ ನಮ್ಮ ಮಂತ್ರಿಗಳು ಹೇಳಿದ ಹಾಗೆ ಅಲ್ಲಿ ICAR ಪ್ರತಿನಿಧಿಗಳು ಯಾರೂ ಇಲ್ಲ. ICAR ಪ್ರತಿನಿಧಿ ಅಲ್ಲಿ ಇರುವುದು ಸೂಕ್ತ. ಆದರೆ, ವಿಜ್ಞಾನಿ ಎಂದರೆ ಯಾವುದೋ ಒಂದು P.hd., ಮಾಡಿದವರಾಗಲಿ ಅಥವಾ ಯಾರಾದರೂ ಸಾಮಾನ್ಯ ವಿಜ್ಞಾನ ವಿಷಯದಲ್ಲಿ ಪಥವೀಧರರಾಗಿರುವವರನ್ನಾಗಲಿ ಮಾಡಿದರೆ ಅದು ಪ್ರಯೋಜನವಾಗುವುದಿಲ್ಲ. ಮೀನುಗಾರಿಕೆ ಇರಬಹುದು, ಹೈನುಗಾರಿಕೆ ಇರಬಹುದು, ಪಶು ವೈದ್ಯಕೀಯದಲ್ಲಿ ಅನುಭವ ಇರುವಂಥ ವಿಜ್ಞಾನಿಗಳನ್ನು ಮಾಡಿದರೆ ಮಾತ್ರ ಸೂಕ್ತ. ಅದು ಬಿಟ್ಟು ಯಾವುದೋ ಒಬ್ಬ ವಿಜ್ಞಾನಿ ಯಾವುದೋ ಅನುಭವ ಇರುವವರನ್ನು ನೇಮಿಸಿದರೆ ಆ ವಿಶ್ವವಿದ್ಯಾಲಯ

ಪ್ರಗತಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನನ್ನ ಅನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೆ, ಈ Act ಕೆಳಗಡೆ ex-officio members, other members ಎಂದು ಇದೆ. Constitution of the Board of Managementನಲ್ಲಿ ಎಲ್ಲಿಯೂ un-represented communityಗೆ reservation aspect ಇಲ್ಲ. ಅದಕ್ಕಾಗಿ ತಾವು reservationಗೆ provision ಮಾಡದಿದ್ದರೆ ಈ Act becomes invalid. ಎಲ್ಲಿಯವರೆಗೆ ಆ ಜನಕ್ಕೆ ಪ್ರಾತಿನಿಧ್ಯ ಕೊಡುವುದಿಲ್ಲ, ಉದಾಹರಣೆಗೆ ಹೇಳುವುದಾದರೆ, ಕೋಳಿ ಸಮಾಜದವರು, ಬೆಸ್ತರು, traditional ಆಗಿ ಮೀನು ಹಿಡಿಯುವವರು. ಗೊಲ್ಲರು, ಕುರುಬರು, ನಾಯಕರು, ಇವರೆಲ್ಲಾ ನಮ್ಮ ಹಳ್ಳಿ ವಾಡಿಕೆಯ ಪ್ರಕಾರ ಇವರೆಲ್ಲಾ ದನ, ಮೇಕೆಗಳನ್ನು ಸಾಕಿಕೊಂಡು ಬಂದಿರತಕ್ಕಂಥವರು. ಕೆಲವು ಸಮಾಜದವರು ಮೀನು ಹಿಡಿಯತಕ್ಕಂಥವರು ಇದ್ದಾರೆ, ಈಗ ರೈತ ಸಮುದಾಯದಲ್ಲಿ ಎಲ್ಲರೂ ಮಾಡುತ್ತಾರೆ. Broad base ನಲ್ಲಿ you should not exploit the microscopic un-represented castes.

ಅಧ್ಯಕ್ಷರು:– Reservation ಅನ್ನು provide ಮಾಡಬೇಕೆಂದು ಹೇಳುತ್ತಾರೆ ನೋಡಿ.

ಶ್ರೀ ಕೆ. ಶಿವಮೂರ್ತಿ:– ತಾವು ಅವರಿಗೆ ಪ್ರಾತಿನಿಧ್ಯ ಕೊಡದೇ ಹೋದರೆ this Act becomes invalid as per the Constitution.

ಅಧ್ಯಕ್ಷರು:– Under what provision? Tell me I say. ನೀವು ಸುಮ್ಮನೆ ಹಾಗೆ ಹೇಳಬಾರದು. ನೀವು ಹೇಳಿದ ಅಂಶ ಇದರಲ್ಲಿ ಸೇರಲಿಲ್ಲವೆಂದರೆ Constitution ಪ್ರಕಾರ invalid ಆಗುತ್ತದೆಂದು ಎಲ್ಲಿದೆ? Please tell me, where it is?

SRI K. SHIVAMURTHY:- Sir, I will convince. Central Act ನಲ್ಲಿ SC/ST representation ಯಾವ್ಯಾವ ಮಸೂದೆಗಳನ್ನು ಮಾಡುತ್ತಿರೋ .,

Mr. SPEAKER:- It is a matter of Social justice. Social justice ದೃಷ್ಟಿಯಿಂದ ಈ ರೀತಿಯ provision ಮಾಡಿದ್ದಾರೆ. Un-constitutional ಎಂದು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಕೆ. ಶಿವಮೂರ್ತಿ:– ಹೌದು ಸಾರ್ ಅದನ್ನೇ ಹೇಳಿದ್ದು, your are the protector. ಅದನ್ನು involve ಮಾಡುವುದಕ್ಕೆ the spirit of the ..

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, Section 27 (2) ಗೆ ಇವರೇನು suggestion ಮಾಡಿದ್ದಾರೆ, ತಾವು ದಯಮಾಡಿ ನೋಡಿ (ii) One progressive livestock farmer nominated by the Government ಎಷ್ಟು general clarification? ಇವರ ಪ್ರಕಾರ livestockಅನ್ನು ಇಟ್ಟಿರತಕ್ಕಂಥ former ಎಂದರೆ ಇವರ definition ಏನು?

ಅಧ್ಯಕ್ಷರು:– ಈಗ ನೀವು livestock ಇಟ್ಟಿಲ್ಲವೆ? ನಿಮಗೆ ಯಾವುದಾದರೂ exercise ಬೇಕೆ?

ಶ್ರೀ ಕೆ.ಆರ್. ರಮೇಶ್ ಕುಮಾರ್:– ಅಧ್ಯಕ್ಷರೆ, As they apprehended, ಕೊನೆಗೆ ಇದು ಏನಾಗುತ್ತಿದೆ, ಇದು political expediency ಆಗಿ ನಮ್ಮ ಹಿಂದೆ ಯಾರು ಬ್ಯಾಗ್ ಹಿಡಿದುಕೊಂಡು ಸುತ್ತವವರನ್ನು appoint ಮಾಡಿ ಇದರ ಪ್ರಾವಿತ್ರ್ಯತೆ ಹೋಗಿ ಬೀಡುತ್ತದೆ. ಇದು ಆಗಬಾರದು. Be more specific. One progressive fisherman, ಇವರು ಯಾರಿಗಾದರೂ ಮೀನುಗಾರರನ್ನು ತೆಗೆದುಕೊಂಡು ಬಂದು ಮಾಡುತ್ತಾರೆಯೆ? ಹೇಳ್ರಿ. Is it even possible? Draft ಮಾಡುವಾಗ ಇವರು ಯೋಚಿಸುವುದಿಲ್ಲವೆ? It is very painful. One representative of the industries,.

ಅಧ್ಯಕ್ಷರು:– ಅದು ಸಿಗುತ್ತಾರೆ ಬಿಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಇದು ನಿಮಗೆ ಪರಿಣಿತಿ ಇದೆ ನೀವು you are capable of selecting. ಅದು ನಿಮ್ಮ ವರ್ಗ. Woman rural social worker ಎಂದು ಹೇಳುತ್ತೀರಿ, will it ultimately lead to favouring

somebody who awares around the authority? ಇವತ್ತು ಇವರು ಇದ್ದಾರೆ ನಾಳೆ ಇನ್ನೊಬ್ಬರು ಸರ್ಕಾರ ನಡೆಸುತ್ತಾರೆ.

ಅಧ್ಯಕ್ಷರು:– ಹಾಗಾದರೆ ನಿಮಗೆ ಪರಿಚಯವಾಗುವುದು ಹೇಗೆ?

ಶ್ರೀ ಕೆ.ಆರ್. ರಮೇಶ್ ಕುಮಾರ್:– ಏನು ಅಧ್ಯಕ್ಷರೆ, women workers ಅನ್ನು identify ಮಾಡುವುದನ್ನು ನಾನು ತಮಗೆ ಹೇಳಿ ಕೊಡಬೇಕೆ?

ಅಧ್ಯಕ್ಷರು:– ನಿಮ್ಮ ಸುತ್ತ ತಿರುಗದೆ ಹೋದರೆ,..

ಶ್ರೀ ಕೆ.ಆರ್. ರಮೇಶ್ ಕುಮಾರ್:– ಅಧ್ಯಕ್ಷರೆ, ಬೇರೆ ಯಾರಾದರೂ ಕೇಳಿದರೆ ಸ್ವಲ್ಪ ಕಷ್ಟವಾಗಬಹುದು. ತಮ್ಮ expertiseನಲ್ಲಿ, ತಾವು chairನಲ್ಲಿ ಕುಳಿತ್ತಿದ್ದಾಗ ಈ ಸದನದಲ್ಲಿ ಬೇರೆ ಯಾರಿಗಾದರೂ women workersಅನ್ನು identify ಮಾಡುವ ಜವಾಬ್ದಾರಿ ಕೊಡುವುದು ಅಪಮಾನವಾಗುತ್ತದೆ.

ಅಧ್ಯಕ್ಷರು:– ಅದು ಆ ರೀತಿ ಅಲ್ಲ, ನಾನು ಆ ದೃಷ್ಟಿಯಿಂದ ಹೇಳಲಿಲ್ಲ ತಾವು ತಪ್ಪಾಗಿ ಭಾವಿಸಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಜಯಚಂದ್ರರವರ ಹಿನ್ನೆಲೆ ಸ್ವಲ್ಪ ಹೇಳಬೇಕು. ಅವರು ಏಕೆ ಹೀಗೆ ಮಾಡಿದರು?

ಅಧ್ಯಕ್ಷರು:– ಆ ರೀತಿ ಅಲ್ಲ. ತಾವು ಈಗ category ಹೇಳಿದಿರಲ್ಲ, fisheries, ಅವರು ಇವರು...

ಶ್ರೀ ಕೆ.ಆರ್. ರಮೇಶ್ ಕುಮಾರ್:– ತಮಾಷೆ ಎಂದರೆ, ಇವರು lastಗೆ one rural Educationist ಎಂದು ಹೇಳುತ್ತಾರೆ. Educationistಗೆ definition ಏನು? ಜಾಸ್ತಿ donation ತೆಗೆದುಕೊಳ್ಳುವವರಾ? Dismissed ಕಂಡಕ್ಟರ್‌ಗಳು, ಪೊಲೀಸ್ ಕಾನ್ಸ್‌ಟೇಬಲ್‌ಗಳೆಲ್ಲ ಕಾಲೇಜುಗಳನ್ನು ಮಾಡಿಬಿಟ್ಟಿದ್ದಾರೆ. ಸುಮಾರು ಇಂಜಿನಿಯರಿಂಗ್ ಕಾಲೇಜುಗಳನ್ನು ನಡೆಸುವವರು ಅವರೆ. ಅವರೆಲ್ಲ Educationistಗಳೆ? ಅವರ ಪೈಕಿ ಯಾರಾದರೊಬ್ಬರನ್ನು ಮಾಡುವುದಾ? ಅದರಲ್ಲೂ rural educationist ಅಂತೆ. ಒಂದು ಬಿಲ್‌ಅನ್ನು introduce ಮಾಡುವಾಗ amendment introduce ಮಾಡುವಾಗ dignity of

the House ನೋಡಬೇಕಲ್ಲ. See, he is a very learned man, he is a man in the profession. It is an insult to this House. ಇಷ್ಟೊಂದು ambiguous ಆಗಿ ಒಂದು broader classificationನಲ್ಲಿ ತಂದು introduce ಮಾಡಿದರೆ, it will not add on to the reputation of the House. I appeal to the Hon'ble Minister, please think over this. ನಿಮ್ಮ drafting sectionನವರು ಈ ರೀತಿ ಮಾಡಿದ್ದಾರೆ? ಬೇಕಾದರೆ ನಮ್ಮನ್ನು deputation ಮೇಲೆ ನಮ್ಮನ್ನು ತೆಗೆದುಕೊಳ್ಳಿ. ಸ್ವಲ್ಪ ದಿವಸ ಬಂದು honorary ಆಗಿ ಸಹಾಯ ಮಾಡುತ್ತೇವೆ. why do you do this job? No, this is not right. ನಿಮಗೆ ಇದು ಗೌರವವನ್ನು ತರುವುದಿಲ್ಲ, ಘನತೆಯನ್ನು ತರುವುದಿಲ್ಲ. ದಯಮಾಡಿ ಪುನರಾಲೋಚನೆ ಮಾಡಿ. ಪ್ರತಿಷ್ಠೆ ಮೇಲೆ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ.

ಅಧ್ಯಕ್ಷರು:– ನೋಡಿ, ಮಾಡುವುದಕ್ಕೆ ಅವಕಾಶವಿದ್ದರೆ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೆಲ್ಲರೂ ಪಶುವೈದ್ಯಕೀಯ, ಪಶುವಿಜ್ಞಾನ ವಿಶ್ವವಿದ್ಯಾನಿಲಯದ ಬಗ್ಗೆ ಸಾಕಷ್ಟು ಸಲಹೆಗಳನ್ನು ನೀಡಿದ್ದಾರೆ. ನಾವು ಇವತ್ತು ಸದನದ ಮುಂದೆ ಬಂದಿರತಕ್ಕಂಥದ್ದು, ಈ ವಿಧೇಯಕವನ್ನು ತಿದ್ದುಪಡಿ ಮಾಡಿ ಎಂದು. ತಿದ್ದುಪಡಿಯನ್ನು ಮಾಡಿ, ಅವಕಾಶವನ್ನು ಮಾಡಿದ ನಂತರ ನಾವು nominate ಮಾಡುವಂತಹ ಸಂದರ್ಭದಲ್ಲಿ ಇವರೆಲ್ಲ ಸದಸ್ಯರು ಹೇಳಿದಂತಹ ಸಲಹೆಗಳನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು:– ಅದಕ್ಕೆ ಒಂದು ನಿಯಮ ಬೇಕಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ನಿಯಮ ಎಂದರೆ, ನಮ್ಮ ICAR guidelines ಪ್ರಕಾರ ಏನಿದೆಯೋ ಆ ಶಬ್ದಗಳನ್ನೇ ನಾವು ಹಾಕಿರುವುದು. ಆದರೆ ಇವರು ಹೇಳಿರತಕ್ಕಂತಹ ಎಲ್ಲ ವಿಚಾರಗಳೂ ಸಹ ಈಗಾಗಲೇ ನನ್ನ ಅನುಭವಕ್ಕೆ ಬಂದಿದೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇದೊಂದು ರಾಜಕೀಯವಾಗಿರತಕ್ಕಂತಹ rehabilitation centre

ಆಗುವುದಕ್ಕೆ ನಾವು ಬಿಡುವುದಿಲ್ಲ. ಯಾವುದೇ ಕಾರಣಕ್ಕೂ ಅದು ಆಗಬಾರದು ಎನ್ನತಕ್ಕಂತಹ ಸ್ಪಷ್ಟ ಆಶ್ವಾಸನೆಯನ್ನು ನಾನು ಕೊಡುತ್ತೇನೆ. ಇಲ್ಲಿ ಹೈನುಗಾರಿಕೆ ಎಂದು ಹೇಳಬೇಕಾದರೆ, ನಮಗೆ ಹಾಲನ್ನು ಉತ್ಪಾದನೆ ಮಾಡತಕ್ಕಂಥದ್ದು, ಗ್ರಾಮೀಣ ಪ್ರದೇಶದಿಂದ ತರತಕ್ಕಂಥದ್ದು, ಇಂತಹ ವಿಚಾರಗಳೇ ಜಾಸ್ತಿ ಇದೆ. ಆದರೆ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ದೇಶೀಯವಾಗಿರುವ ತಳಿಗಳನ್ನು ಅಭಿವೃದ್ಧಿ ಮಾಡುವ ಬಗ್ಗೆ ಒಂದು ಮಾತನ್ನು ಹೇಳಿದರು. ಇದರ ಬಗ್ಗೆ ಸರ್ಕಾರ ವಿಶೇಷವಾದ ಕಾಳಜಿಯನ್ನು ವಹಿಸಿದೆ. ದೇಶೀಯ ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ನಾವು ಸಂಶೋಧನೆಗೆ ಒತ್ತು ಕೊಡಬೇಕೆನ್ನುವ ಹಿನ್ನೆಲೆಯಲ್ಲಿ ಬಹುಶಃ ಯಾವತ್ತೂ ಕೂಡ, ಬೆಂಗಳೂರಿನಲ್ಲಿರುವ NDRI ಎನ್ನುವ ಸಂಸ್ಥೆಯಲ್ಲೇನು ಮಹಾತ್ಮ ಗಾಂಧೀಜಿಯವರು ಬಂದು ಸುಮಾರು 3 ದಿವಸಗಳ ಕಾಲ ಹಸುಗಳನ್ನು ಸಾಕುವಂತಹ ಕೆಲಸವನ್ನು ಮಾಡಿದರು, ಅಂತಹ NDRI ಸಂಸ್ಥೆಯಿಂದ ಯಾವುದೇ ಸಲಹೆಗಳನ್ನು ಪಡೆದಿರಲಿಲ್ಲ. ನಾನು ಈ ಬದಲಾವಣೆ ತರಬೇಕಾದಾಗ ಅದನ್ನೆಲ್ಲಾ ಕೂಡ ಗಮನದಲ್ಲಿಟ್ಟುಕೊಂಡು ನಾನು ಇದನ್ನೆಲ್ಲಾ ಅಡಕ ಮಾಡಬೇಕು, ಅದರಲ್ಲಿ ವಿಶೇಷವಾಗಿರತಕ್ಕಂಥ ದೇಶೀಯ ತಳಿಗಳನ್ನು, ನಾನು ಸ್ಪಷ್ಟವಾಗಿ ಹೇಳುತ್ತೇನೆ, ದೇಶೀಯ ತಳಿಗಳನ್ನು ಅಭಿವೃದ್ಧಿ ಮಾಡುವುದರ ಬಗ್ಗೆ ಪರಿಣಿತಿ ಇರತಕ್ಕಂಥವರನ್ನೇ ತರುತ್ತೇವೆ ಎನ್ನುವ ಆಶ್ವಾಸನೆ ಕೂಡ ನಾನು ಈ ಸದನದಲ್ಲಿ I am going on record. ಆದರೆ, ಒಂದು ನಿಮಿಷ, ತಾವು ಸಲಹೆಗಳನ್ನು ಹೇಳಿದಿರಿ,...

ಶ್ರೀ ಕೆ.ಆರ್. ರಮೇಶ್ ಕುಮಾರ್:– ಒಂದು ನಿಮಿಷ ಯೀಲ್ಡ್ ಆಗಿ. ಆಶ್ವಾಸನೆಗಳು ಶಾಸನದ ಒಂದು ಭಾಗ ಆಗುವುದಿಲ್ಲ. ನೀವು ಆಶ್ವಾಸನೆ ಕೊಟ್ಟರೆ ನೀವು ಬಹಳ ಪ್ರಮಾಣಿಕವಾಗಿರುವವರು, ನೀವು ನಡೆದುಕೊಳ್ಳುತ್ತಿರಿ ಎನ್ನುವುದು ಗೊತ್ತಿದೆ.

ಆದರೆ, ನೀವೇ ಇರುತ್ತೀರಿ ಎಂಬ ಗ್ಯಾರಂಟಿ ಏನು? ಆದರೆ, ಶಾಸನ ಗ್ಯಾರಂಟಿಯಾಗಿರುತ್ತದೆ. ಮಾನ್ಯ ಪುಟ್ಟಣ್ಣಯ್ಯನವರು ಅನುಭವದ ಆಧಾರದ ಮೇಲೆ ಆ ಮಾತನ್ನು ಹೇಳಿದ್ದಾರೆ. ಇವತ್ತಿನದಿವಸ ನಮ್ಮ ದೇಶದ ತಳಿಗಳು

ಅಂದರೆ, original species extinct ಆಗುತ್ತಿವೆ. ಅವುಗಳನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಅದಕ್ಕೆ ಒಂದು special provision ಮಾಡಿ. Make it clear. ಈಗ ಇಷ್ಟೇ ಜನರನ್ನು ಮಾಡುತ್ತಿರುವಾಗ ಇದನ್ನು ಸಹ ಮಾಡಬಹುದು. ಇದರಲ್ಲಿ rural educationist ಮತ್ತು women social worker ಇರುತ್ತಾರೆ. ಆದ್ದರಿಂದ, ದೇಶಿಯ ತಳಿಗಳಲ್ಲಿ ಪರಿಣಿತಿ ಹೊಂದಿರುವ ಒಬ್ಬರನ್ನು ಇದರಲ್ಲಿ ಅವಕಾಶ ಮಾಡಿದರೆ ಆಗುವ ನಷ್ಟವೇನು? ದಯಮಾಡಿ ಮಾಡಿ. Please concede to that.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೇ, ಮಾನ್ಯ ರಮೇಶ್ ಕುಮಾರ್‌ರವರು ಹೇಳಿರತಕ್ಕಂಥ pointಗೆ ನಾನು ಬರುತ್ತಿದ್ದೇನೆ. ಇವತ್ತಿನದಿವಸ ದೇಶಿಯ ತಳಿಗಳು ನಶಿಸಿ ಹೋಗುತ್ತಿರುವುದರಿಂದ ಅವುಗಳನ್ನು ಉಳಿಸಬೇಕೆಂಬ ಕಾರಣಕ್ಕೋಸ್ಕರ ನೇಮಕಾತಿ ಮಾಡುವಂಥ ಸಂದರ್ಭದಲ್ಲಿ ಅದರಲ್ಲಿ ಪರಿಣಿತರಿರುವವರನ್ನು ನೇಮಕಾತಿ ಮಾಡಲಾಗುವುದು. ಆದ್ದರಿಂದ, ವಿಧೇಯಕದಲ್ಲಿ ಅವಕಾಶ ಮಾಡಿಕೊಡಿ ಎಂಬ ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದೇವೆ. ಅವಕಾಶ ಮಾಡಿದ ಮೇಲೆ ತದನಂತರ ನಾವು ನೇಮಕಾತಿ ಮಾಡತಕ್ಕಂಥದ್ದು ಆಗುತ್ತದೆ. ಆದರೆ, drafting ನಲ್ಲಿ ಈ ವಿಚಾರವನ್ನು ತರಬೇಕೆಂಬ ಮಾತನ್ನು ಹೇಳಿದ್ದಾರೆ. ಆದ್ದರಿಂದ, ಸ್ಥಳೀಯವಾಗಿರತಕ್ಕಂಥ ದೇಶೀಯ ತಳಿಗಳಲ್ಲಿ ಅಂದರೆ, ಮೀನುಗಾರಿಕೆ ಕ್ಷೇತ್ರದ ಸಂಶೋಧನೆಯಲ್ಲಿ ಅನುಭವ ಹೊಂದಿರತಕ್ಕಂಥವರು ಎಂದು ಬದಲಾವಣೆ ಮಾಡುವುದಕ್ಕೆ ನಾನು ಒಪ್ಪುತ್ತೇನೆ. ಆ ರೀತಿ ಬದಲಾವಣೆ ಮಾಡಿ ಇಲ್ಲಿ ತರುತ್ತೇನೆ. ಆದರೆ, ಯಾವುದೇ ಸಂದರ್ಭದಲ್ಲಿ ಇದು political rehabilitation centre ಆಗುವುದಿಲ್ಲ ಎಂಬ ಆಶ್ವಾಸನೆ ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಸಚಿವರೇ, ಮೀಸಲಾತಿ ಬಗ್ಗೆ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಪರಿಣಿತಿ

ಹೊಂದಿರತಕ್ಕಂಥವರು ಎಂದರೆ, ಅವರು ಯಾವುದೇ ವರ್ಗಕ್ಕೆ ಸೇರಿದ್ದರೂ ಸಹ ನಮ್ಮ ವಿಶ್ವವಿದ್ಯಾಲಯಕ್ಕೆ ಪೂರಕವಾಗಿ ಅವರ ಅನುಭವ ಸಹಾಯವಾಗುವುದಾದರೆ ಖಂಡಿತವಾಗಿ ಇದರಲ್ಲಿ ಬಳಕೆ ಮಾಡಿಕೊಳ್ಳುತ್ತೇವೆ. ಆದ್ದರಿಂದ, ಇದರಲ್ಲಿ ಜಾತಿಯ ಪ್ರಶ್ನೆ ಬರುವುದಿಲ್ಲ. ಆದರೂ ಕೂಡ ಇವತ್ತಿನ ಸಾಮಾಜಿಕ ನ್ಯಾಯದ ಹಿನ್ನಲೆಯಲ್ಲಿ ಆ ವರ್ಗಗಳಿಗೆ ಆದ್ಯತೆ ಕೊಡಬೇಕೆಂಬುದು ನಮ್ಮ ಗಮನದಲ್ಲಿರುತ್ತದೆ. ಆದ್ದರಿಂದ, ಖಂಡಿತವಾಗಿ ಕೂಡ ಅದನ್ನು ಪರಿಗಣಿಸುತ್ತೇವೆಂಬ ಮಾತನ್ನು ಹೇಳುತ್ತಾ 'ದೇಶಿಯ ತಳಿಗಳ ಸಂಶೋಧನೆಯಲ್ಲಿ ಪರಿಣಿತರು' ಎಂಬ ಒಂದು ಬದಲಾವಣೆಯೊಂದಿಗೆ ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ಹೇಳಿರತಕ್ಕಂಥ ವಿಷಯಕ್ಕೆ ಯಾವುದೇ ರೀತಿಯ ಬಿನ್ನಾಭಿಪ್ರಾಯ ಇಲ್ಲ. ಏಕೆಂದರೆ, ನೀವು ಹೇಳಿದ ಮೇಲೆ ಮಾಡುತ್ತೀರೆಂಬ ನಂಬಿಕೆ ಇದೆ. ಆದರೆ, ನಿಯಮಾವಳಿಗಳನ್ನು ಮಾಡುವಾಗ ಸರ್ಕಾರಕ್ಕೆ ಅಂದರೆ, ನಮ್ಮ ಗಮನಕ್ಕೆ ಅದರ ಗಂಭೀರತೆ ಅನೇಕ ಸಂದರ್ಭಗಳಲ್ಲಿ ಬರುವುದು ಬಹಳ ಕಡಿಮೆ. ಆ ನಿಯಮಾವಳಿಗಳು ಅಧಿಕಾರಿಗಳ ಲೆವೆಲ್‌ನಲ್ಲಿ ಆಗಿ ಹೋಗುತ್ತವೆ. ಈಗ ಸಚಿವರ ಗಮನಕ್ಕೆ ಬಂದು ಇಷ್ಟೆಲ್ಲ ಚರ್ಚೆ ಕೂಡ ಆಗಿದೆ. ಅದರೆ ಅಧಿಕಾರಿಗಳು ಇದ್ಯಾವುದನ್ನು ಗಮನಿಸುವುದಿಲ್ಲ. ನಿಯಮಾವಳಿಗಳನ್ನು ಆನಂತರ rehabilitation center ಆಗುವ ರೀತಿಯಲ್ಲಿಯೇ ಅವರು ಮಾಡುತ್ತಾರೆ. ಏಕೆಂದರೆ, ನಮಗೆ ಯಾವತ್ತೂ ಕೂಡ ಒತ್ತಡ ಇರಬೇಕೆಂಬುದು ಅಧಿಕಾರಿ ವರ್ಗದವರಿಗೆ ಅಪೇಕ್ಷೆ ಇರುತ್ತದೆ. ಅಂದರೆ, ಸರ್ಕಾರದ ಮೇಲೆ ಒತ್ತಡ ಆಗಿ ಆ institutionಗೆ ಸರಿಯಾದವರು ಬರಬಾರದೆಂಬುದು ಅವರಿಗೆ ಇರುತ್ತದೆ. ಏಕೆಂದರೆ, ಅಲ್ಲಿಗೆ ಸರಿಯಾದವರು ಬಂದರೆ ಆಮೇಲೆ ಅವರದ್ದು ಏನು ನಡೆಯುವುದಿಲ್ಲ ಎಂಬುದು ಇರುತ್ತದೆ.

ಆದ್ದರಿಂದ, ಅಧಿಕಾರಿ ವರ್ಗದವರು ಏನು ನಿಯಮಾವಳಿಗಳನ್ನು ಮಾಡುತ್ತಾರೆಯೋ ಅದನ್ನು ತಾವು ಸ್ವತಃ ತರಿಸಿ ನೋಡಿ ಅದನ್ನು ಬಿಗುವಾದ ರೀತಿಯಲ್ಲಿ ಅಂದರೆ, ನಮ್ಮೆಲ್ಲರ ಭಾವನೆ ಅಥವಾ ನಿಮ್ಮ ಭಾವನೆ ಏನಿದೆ ಅದನ್ನು ಸರಿಯಾದ ರೀತಿಯಲ್ಲಿ ಅಳವಡಿಕೆ ಆಗುವ ರೀತಿಯಲ್ಲಿ ತಾವು ವೈಯಕ್ತಿಕವಾಗಿ ಎಚ್ಚರಿಕೆ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಆಗ್ರಹಿಸುತ್ತೇನೆ.

ಶ್ರೀ ಎಂ. ರಾಜಣ್ಣ:– ಮಾನ್ಯ ಅಧ್ಯಕ್ಷರೆ, ICAR representative ಗಿಂತ Indian Veterinary Council representative ಇರತಕ್ಕಂಥದು ಉತ್ತಮ ಎಂಬುದು ನನ್ನ ಸಲಹೆ ಆಗಿದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, Karnataka Veterinary Councilಗೆ ಅವಕಾಶ ಮಾಡಿದೆ.

ಶ್ರೀ ಎಂ. ರಾಜಣ್ಣ:– Karnataka Veterinary Council ಇದೆ. ಆದರೆ, Indian Veterinary Councilಗೆ ಅವಕಾಶ ಕೊಡಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಸಚಿವರೆ, ತಾವು ದೇಶೀಯ ತಳಿಗಳ ಬಗ್ಗೆ ಹೇಳಿದ್ದೀರಿ. ದೇಶೀಯ ತಳಿಗಳಲ್ಲಿ ಅಮೃತಮಹಲ್ ಕಾವಲ್ ತಳಿಗಳಲ್ಲಿ ಬಹಳ ಮೋಸ ನಡೆಯುತ್ತಿದೆ. ಹಿಂದೆ ದೇಶೀಯ ತಳಿಗಳಾದ ಅಮೃತಮಹಲ್ ಕಾವಲ್ ತಳಿಗಳು ಇವತ್ತಿನದಿವಸ ನಾಪತ್ತೆ ಆಗುತ್ತಿವೆ. ಆ ದೇಶಿಯ ತಳಿಗಳನ್ನು ಮತ್ತೇ ತಂದು, ಹಿಂದೆ ಯಾವ ರೀತಿಯಾಗಿ ಆ ತಳಿಗಳು ಇದ್ದವು ಆ ರೀತಿಯಾಗಿ ಅದರ ನಿಜವಾದ ತಳಿಗಳನ್ನು ಉಳಿಸುವುದಕ್ಕೆ ಅದರಲ್ಲಿ ಪರಿಣಿತರಾದವರಲ್ಲಿ ಒಬ್ಬರನ್ನು ಇದರಲ್ಲಿ ಹಾಕಿಕೊಳ್ಳಬೇಕೆಂದರೆ, ಅಮೃತಮಹಲ್ ಕಾವಲ್ ತಳಿಗಳಲ್ಲಿ ಯಾರು ಪರಿಣಿತರಿದ್ದಾರೆ ಅವರು ವಂಶಪಾರಂಪರೆಯಾಗಿ ಬಂದಂಥ ಅನುಭವಸ್ಥರು ಅದರಲ್ಲಿದ್ದಾರೆ. ಆದ್ದರಿಂದ, ಇದರಲ್ಲಿ ಒಬ್ಬರನ್ನು ನೇಮಿಸಿಕೊಳ್ಳುವುದರಿಂದ ಈ ದೇಶೀಯ ತಳಿಗೆ ಉತ್ತೇಜನ ಸಿಗುತ್ತದೆ. ಇಲ್ಲದಿದ್ದರೆ ಉತ್ತೇಜನ ಸಿಗುವುದಿಲ್ಲ. ತಾವು ಮೊನ್ನೆದಿವಸ ಅಲ್ಲಿಗೆ ಬಂದು ಭೇಟಿ ಮಾಡಿ ಅಲ್ಲಿ ಎಲ್ಲವನ್ನು ಮಿಕ್ಸ್

ಮಾಡಿ ಹಾಕಿರತಕ್ಕಂಥ ಕರ್ಮಕಾಂಡವನ್ನು ನೋಡಿದ್ದೀರಿ. ಆದ್ದರಿಂದ, ದಯವಿಟ್ಟು ಅದರ ಬಗ್ಗೆ ನೋಡಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಹಳ್ಳಿಕಾರ್, ಅಮೃತ ಮಹಲ್ ಕಾವಲ್, ಮಲೆನಾಡು ಗಿಡ್ಡ..

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಸಚಿವರೇ, ಒಂದು ನಿಮಿಷ, ವಿಶೇಷವಾಗಿ ನಮ್ಮ ಭಾಗದ ಮಲೆನಾಡು ಗಿಡ್ಡ ತಳಿ ಸಂಪೂರ್ಣವಾಗಿ ನಾಶವಾಗುತ್ತಿದೆ.

ಅಧ್ಯಕ್ಷರು:– ಮಲೆನಾಡು ಗಿಡ್ಡ ತಳಿ ಇದರಲ್ಲಿ ಸೇರಿಸಿಕೊಳ್ಳಿ.

ಶ್ರೀ ಬಿ.ಬಿ. ನಿಂಗಯ್ಯ:– ಮಲೆನಾಡ್‌ಗಿಡ್ಡ ತಳಿಗೆ ಹೆಚ್ಚಿನ ಆದ್ಯತೆ ಕೊಡಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಮಾನ್ಯ ನಿಂಗಯ್ಯನವರು ಪ್ರಸ್ತಾಪ ಮಾಡಲಿಲ್ಲ ಎಂಬ ಕಾರಣಕ್ಕೋಸ್ಕರ ಈ ವಿಷಯವನ್ನು ನಾನೇ ಹೇಳುತ್ತಿದ್ದೇನೆ.

ಅಧ್ಯಕ್ಷರು:– ಮಲೆನಾಡು ಗಿಡ್ಡ ತಳಿ ಒಂದೊಂದು ಲೋಟ ಹಾಲು ಕೊಡುತ್ತದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ತಳಿಗಳನ್ನು ಉಳಿಸತಕ್ಕಂಥ ಅವಶ್ಯಕತೆ ಇದೆ.

ಅಧ್ಯಕ್ಷರು:– ಮಾಡಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ಸಭೆಯ ಮುಖಾಂತರ ಈ ರಾಜ್ಯದ ಜನತೆಗೆ ತಿಳಿಸುವುದೇನೆಂದರೆ, ಸ್ಥಳೀಯವಾಗಿರತಕ್ಕಂಥವರು ದೇಶೀಯ ತಳಿಯ ಹಾಲನ್ನು ಕುಡಿಯುತ್ತಾರೆಯೋ ಅವರಿಗೆ ಯಾವುದೇ ರೀತಿಯ ಕಾಯಿಲೆ ಬರುವುದಿಲ್ಲ. ಅದರಲ್ಲಿ ಒಂದು medicinal value ಇರುತ್ತದೆ. ಆದರೆ, ವಿದೇಶಿ ತಳಿಗಳಲ್ಲಿ medicinal value ಇರುವುದಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳುವುದು ನೂರಕ್ಕೆ ನೂರು ಸತ್ಯ. ದೊಡ್ಡ ಹಸುವಿನ ಹಾಲು ಕುಡಿದರೆ ಎಲ್ಲಾ ಕಾಯಿಲೆ ವಾಸಿ ಆಗುತ್ತದೆ ಎಂದು ಹಳ್ಳಿಗಳ ಕಡೆ ಹೇಳುತ್ತಾರೆ. ಆದ್ದರಿಂದ, ದೊಡ್ಡ ಹಸುವಿನ ತಳಿಗಳನ್ನು ಕಾಪಾಡುವ ಕೆಲಸ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಕಾಲುಬಾಯಿ ಜ್ವರ ಬಂದಂಥ ಸಂದರ್ಭದಲ್ಲಿ 15,000 ರಾಸುಗಳು ಸತ್ತು ಹೋದಂಥ ಸಂದರ್ಭಗಳಿವೆ. ಆದರೆ, ಸತ್ತು ಹೋದ ರಾಸುಗಳಲ್ಲಿ ನೂರಕ್ಕೆ ನೂರು ವಿದೇಶಿ ತಳಿಗಳ ರಾಸುಗಳು ಮಾತ್ರ ಆಗಿವೆ. ಸ್ಥಳೀಯವಾಗಿರತಕ್ಕಂಥ ದೇಶೀಯ ತಳಿಗಳ ಒಂದೇ ಒಂದು ತಳಿಗೂ ಸಹ ಆ ಕಾಯಿಲೆ ನಾಟಲಿಲ್ಲ. ಆ ಕಾರಣಕ್ಕೋಸ್ಕರ ದೇಶೀಯ ತಳಿಗಳನ್ನು ಜಾಸ್ತಿ ಮಾಡಬೇಕು. ವಿಶೇಷವಾಗಿ ಕೆಎಂಎಫ್ ಜೊತೆ ಒಂದು ಸಹಯೋಗವನ್ನು ಮಾಡಿಕೊಂಡು ಆ ತಳಿಗಳನ್ನು ಜಾಸ್ತಿ ಮಾಡಬೇಕು. ಮತ್ತೆ sex semen ಬಗ್ಗೆ ಹೇಳುವುದಕ್ಕೆ ಹೋದರೆ ಜಾಸ್ತಿ ಸಮಯ ಆಗುತ್ತದೆ. Sex semen ಎಂದರೆ, ಹಸು ಕರು ಹಾಕಬೇಕಾದರೆ, ಅದು ಹೆಣ್ಣು ಕರುವನ್ನೇ ಹಾಕಬೇಕೆಂಬ ರೀತಿಯಲ್ಲಿ ತಂತ್ರಜ್ಞಾನ ಕೂಡ ಇದೆ. ಅದಕ್ಕೆ NDRI ಜೊತೆ ಒಡಂಬಡಿಕೆ ಕೂಡ ಮಾಡಿಕೊಂಡಿದ್ದೇವೆ. ಆ ಎಲ್ಲಾ ಹಿನ್ನಲೆಯಲ್ಲಿ ಇದರ ಬಗ್ಗೆ ನಾವು ವ್ಯಾಪಕವಾಗಿ ಚರ್ಚೆ ಮಾಡಿ ಇದನ್ನು ತರುತ್ತಿದ್ದೇವೆ. ಈಗ ನಾವು ಬದಲಾವಣೆ ತರತಕ್ಕಂಥ ಉದ್ದೇಶ ಏನೆಂದರೆ, ದೇಶೀಯ ತಳಿಗಳನ್ನು ಉತ್ತಮಪಡಿಸಬೇಕು, ಹಾಗೆಯೇ ಅವುಗಳಿಗೆ ರಕ್ಷಣೆ ಕೊಡುವುದರ ಜೊತೆಗೆ ಈ ತಳಿಗಳ ಹಾಲನ್ನು ನಮ್ಮ ಜನರು ಹೆಚ್ಚಿನ ಉಪಯೋಗಿಸುವಂತೆ ಆಗಬೇಕೆಂಬ ಮಾತನ್ನು ಹೇಳುತ್ತೇನೆ. ಮಾನ್ಯ ನಿಂಗಯ್ಯನವರು ಮಲೆನಾಡು ಗಿಡ್ಡ ತಳಿಯ ಬಗ್ಗೆ ಹೇಳಿದರು. ಈ ತಳಿ ಬಹಳ ಎತ್ತರ ಇರುವುದಿಲ್ಲ. ಸುಮಾರು ಒಂದೂವರೆ ಅಡಿಯಿಂದ 2 ಅಡಿ ಎತ್ತರ ಇರುತ್ತದೆ. ಮಾನ್ಯ ಅಧ್ಯಕ್ಷರೆ, ತಾವು ಈ ತಳಿಗಳನ್ನು ನೋಡಿರಬೇಕು.

ಅಧ್ಯಕ್ಷರು:– ನಾವು ಸಹ ಅಲ್ಲಿಂದಲೇ ಬಂದಿದ್ದೇವೆ. ಆದ್ದರಿಂದ, ಆ ತಳಿ ಬಗ್ಗೆ ನಮಗೆ ಗೊತ್ತಿದೆ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಸಚಿವರೆ, ತಾವು ಆ ರೀತಿ ಹೇಳುವುದಕ್ಕೆ ಹೋಗಬೇಡಿ. ಅವು ಸುಮಾರು 4 ಅಡಿ ಮೇಲೆ ಇರುತ್ತದೆ. ಆದರೆ, ಆ ತಳಿಯನ್ನು ಉಳಿಸಬೇಕು. ಏಕೆಂದರೆ, ತಾವು ಹೇಳಿದ ಹಾಗೆ ಇವತ್ತಿನದಿವಸ ವಿದೇಶಿ ತಳಿಗಳಿಗೆ ರೋಗನಿರೋಧಕ ಶಕ್ತಿ ಇರುವುದಿಲ್ಲ. ಆ ದೃಷ್ಟಿಯಿಂದ ಸ್ಥಳೀಯ ತಳಿಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ಕೊಡಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಮಲೆನಾಡು ಗಿಡ್ಡ ತಳಿಯ ಹಸುವಿನಿಂದ ಬರತಕ್ಕಂಥ ಹಾಲಿನಿಂದ ಇವತ್ತಿನದಿವಸ ಆಯುರ್ವೇದ ಔಷಧಿಗಳ ಪ್ರಿಪರೇಷನ್ ಆಗುತ್ತಿದೆ. ಆ ಒಂದು ಕಾರಣಕ್ಕೋಸ್ಕರ ಇದರಲ್ಲಿ Medicinal value and herbal value ಇರುತ್ತದೆ. ಆದ್ದರಿಂದ, ಮಲೆನಾಡು ಗಿಡ್ಡ ತಳಿಯನ್ನು ಇವತ್ತು ರಕ್ಷಣೆ ಮಾಡಬೇಕೆಂಬ ಕಾರಣಕ್ಕೋಸ್ಕರ ಈ ಎಲ್ಲ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಬದಲಾವಣೆಯನ್ನು ತಂದಿದ್ದೇವೆ. ಮಾನ್ಯ ಸದಸ್ಯರು ಹೇಳಿದಂಥ ಎಲ್ಲಾ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ದಯಮಾಡಿ ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ನಾಟಿ ತಳಿಯ ಹಸುಗಳು ನೀಡತಕ್ಕಂಥ ಹಾಲಿಗೆ ರೋಗನಿರೋಧಕ ಶಕ್ತಿ ಇರುತ್ತದೆ. ಆದರೆ, ಇವತ್ತಿನದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಈ ತಳಿಗಳು ಮಾಯವಾಗುತ್ತಿದೆ. ಏಕೆಂದರೆ, ಅದು ಒಂದರಿಂದ ಒಂದೂವರೆ ಲೀಟರ್ ಹಾಲನ್ನು ಮಾತ್ರ ಕೊಡುತ್ತದೆ.

ಅಧ್ಯಕ್ಷರು:– ಏಕೆಂದರೆ, ನಾವು ನೀವು ಸಾಕುವುದಿಲ್ಲ ಅದಕ್ಕೆ ಈ ರೀತಿ ಆಗಿದೆ. ಆದ್ದರಿಂದ ಎಲ್ಲಾ ಮಾನ್ಯ ಶಾಸಕರ ಮನೆಯಲ್ಲಿ ಒಂದೊಂದು ನಾಟಿ ಹಸು ಸಾಕುವುದಕ್ಕೆ ಹೇಳಿ.

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ನಾಟಿ ಹಸುವನ್ನು ಸಾಕುವಂಥವರಿಗೆ ಸಹಾಯಧನ ನೀಡತಕ್ಕಂಥದಕ್ಕೆ ಅವಕಾಶ ಕೊಟ್ಟರೆ ಆ ತಳಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಅವಕಾಶ ಆಗುತ್ತದೆ. ಆದ್ದರಿಂದ, ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:– ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2014ನೇ ಸಾಲಿನ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ(ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ

ಖಂಡ–2

ಮಾನ್ಯ ಕಾನೂನು ಸಚಿವರು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಖಂಡ 2 ಕ್ಕೆ ತಿದ್ದುಪಡಿ ಸೂಚನೆಯನ್ನು ನೀಡಿದ್ದಾರೆ. ಮಾನ್ಯ ಸಚಿವರು ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 2ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

"ಸದರಿ ವಿಧೇಯಕದ 2ನೇ ಖಂಡದ (1)ನೇ ಉಪಖಂಡದ ಮೂಲಕ ಪ್ರತಿಯೋಜಿಸಲು ಉದ್ದೇಶಿಸಲಾದ 27ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ" (ಬಿ) ಇತರ ಸದಸ್ಯರು" ಎಂಬ ಶೀರ್ಷಿಕೆಯಡಿಯಲ್ಲಿನ (ii) ನೇ ಬಾಬಿನಲ್ಲಿ "ಒಬ್ಬ ಪ್ರಗತಿಪರ" ಎಂಬ ಪದಗಳ ತರುವಾಯ "ದೇಶಿಯ" ಎಂಬ ಪದವನ್ನು ಸೇರಿಸತಕ್ಕದ್ದು."

ಅಧ್ಯಕ್ಷರು:– ಈಗ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"ಸದರಿ ವಿಧೇಯಕದ 2ನೇ ಖಂಡದ (1)ನೇ ಉಪಖಂಡದ ಮೂಲಕ ಪ್ರತಿಯೋಜಿಸಲು ಉದ್ದೇಶಿಸಲಾದ 27ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ" (ಬಿ) ಇತರ ಸದಸ್ಯರು" ಎಂಬ ಶೀರ್ಷಿಕೆಯಡಿಯಲ್ಲಿನ (ii) ನೇ ಬಾಬಿನಲ್ಲಿ "ಒಬ್ಬ ಪ್ರಗತಿಪರ" ಎಂಬ ಪದಗಳ ತರುವಾಯ "ದೇಶಿಯ" ಎಂಬ ಪದವನ್ನು ಸೇರಿಸತಕ್ಕದ್ದು."

ಮಾನ್ಯ ಮಂತ್ರಿಯವರು ಮಂಡಿಸಿದ ತಿದ್ದುಪಡಿಯ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ತಿದ್ದುಪಡಿಯ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಸಭೆಯ ಮತವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ

ತಿದ್ದುಪಡಿ ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ

ಖಂಡ 2 ತಿದ್ದುಪಡಿಯಾದಂತೆ

ಅಧ್ಯಕ್ಷರು:– ತಿದ್ದುಪಡಿಯಾದ ಖಂಡ 2 ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

ತಿದ್ದುಪಡಿಯಾದ ಖಂಡ 2 ವಿಧೇಯಕದ ಅಂಗವಾಯಿತು.

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು:– ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರಬೇಕೆಂದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾದವು.

ಪ್ರಸ್ತಾವದ ಅಂಗೀಕಾರ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2014ನೇ ಸಾಲಿನ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯೊಂದಿಗೆ ಈ ಸಭೆಯ ಅಂಗೀಕರಿಸಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ತಿದ್ದುಪಡಿಯೊಂದಿಗೆ ಅನುಮೋದನೆ ದೊರಕಿದೆ.

(ಅನುಬಂಧ–8)

ಅಧ್ಯಕ್ಷರು:– ಈಗ ಕರ್ನಾಟಕ ಕಾಕಂಬಿ ನಿಯಂತ್ರಣ ವಿಧೇಯಕ, 2014.